ವಿಷಯ - ಮೂಡಬಿದರೆ ಬೈಪಾಸ್ ರಸ್ತೆ ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 379 (600)

ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದರೆಯ ಬೈಪಾಸಿನ ಬಗ್ಗೆ ಭೂಮಿ ಸ್ವಾಧೀನ ಪಡೆಯುವ ಕಾರ್ಯ ಯಾವ ಹಂತದಲ್ಲಿದೆ?

ಆ) ಬೈಪಾಸಿನ ಕೆಲಸವಾಗಲು ಇಷ್ಟು ನಿಧಾನವಾಗಲು ಕಾರಣವೇನು?

ಇ) ಮೂಡಬಿದರೆಯಲ್ಲಿ ಸದ್ಯದ ವಾಹನ ದಟ್ಟಣೆ ಸಮಸ್ಯೆ ಸರಕಾರದ ಗಮನಕ್ಕೆ ಬಂದಿದೆಯೇ?

ಈ) ಇದರ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಅವಾರ್ಡು ಹಂತದಲ್ಲಿರುತ್ತದೆ.

ಆ) ಬೈಪಾಸ್ ರಸ್ತೆ ಮಾರ್ಗದಲ್ಲಿ ಬರುವ ಸ್ವರಾಜ್ ಮೈದಾನದಲ್ಲಿ ಹಾಗೂ ಒಂದು ಖಾಸಗಿ ಜಮೀನಿನಲ್ಲಿ ಭೂಸ್ವಾಧೀನಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯದ ತಡೆ ಆಜ್ಞೆ ಇರುವುದರಿಂದ ಕಾಮಗಾರಿಯಲ್ಲಿ ವಿಳಂಬವಾಗುತ್ತಿದೆ.

ಇ) ಬಂದಿದೆ.

ಈ) ಉಚ್ಚ ನ್ಯಾಯಾಲಯದಲ್ಲಿ ವಿವಾದ ತೀರ್ಮಾನವಾಗಿ ಕಂದಾಯ ಇಲಾಖೆಯಿಂದ ಜಮೀನನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಿಷಯ - ಕಟೀಲು ಬೈಪಾಸ್ ರಸ್ತೆ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 380 (602)

ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾವಿರಾರು ಯಾತ್ರಿಕರು ಪ್ರತಿ ದಿನ ಸಂದರ್ಶಿಸುತ್ತಿರುವ ಕಟೀಲು ಪ್ರದೇಶದಲ್ಲಿ ರಸ್ತೆ ವಾಹನಗಳಿಂದಾಗಿ ತಡೆಯಾಗುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಇಲ್ಲಿಯ ಬೈಪಾಸ್ ರಚನೆಯು ಕಾರ್ಯಗತವಾಗುವುದು ತಡವಾಗಲು ಕಾರಣವೇನು?

ಇ) ಈ ಯೋಜನೆಯನ್ನು ಸರ್ಕಾರ ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಇಲಾಖೆ)

ಅ) ಬಂದಿದೆ.

ಆ) ಇಲ್ಲಿ 1.80 ಕಿಮೀ ಉದ್ದದ ಬೈಪಾಸ್ ನಿರ್ಮಾಣ ಮಾಡುವ ಉದ್ದೇಶವಿದೆ. ಇದಕ್ಕೆ 11.12 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲೇಬೇಕಾಗುತ್ತದೆ. ಒಟ್ಟು 20.00 ಲಕ್ಷ ರೂ.ಗಳ ಅಂದಾಜು ಆಗುತ್ತದೆ. ಈ ಕಾಮಗಾರಿಯನ್ನು ಅನುದಾನ ಲಭ್ಯವಿಲ್ಲದಿದ್ದುದರಿಂದ ಈ ಸಾಲಿನಲ್ಲಿ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ಇ) ಈ ಕಾಮಗಾರಿಯನ್ನು 1995-96ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿ ಕಾಮಗಾರಿ ತೆಗೆದುಕೊಳ್ಳುವ ಪ್ರಸ್ತಾಪವಿರುತ್ತದೆ.

ವಿಷಯ : ಜಿಲ್ಲಾ ಮಟ್ಟದ ಸೆಷನ್ಸ್ ನ್ಯಾಯಾಲಯಗಳಲ್ಲಿ ಕನ್ನಡದ ಅನುಷ್ಠಾನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 381 (604)

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಸೆಷನ್ಸ್ ನ್ಯಾಯಾಲಯಗಳಲ್ಲಿ ಬಹುತೇಕ ಪ್ರತಿ ಹಂತದಲ್ಲೂ ಇಂಗ್ಲೀಷ್‌ನಲ್ಲಿ ವ್ಯವಹರಿಸುತ್ತಿರುವುದು ನಿಜವೇ?

ಆ) ರಾಜ್ಯ ಸರ್ಕಾರವು ಕನ್ನಡ ಜಾಗೃತಿ ವರ್ಷವನ್ನು ಆಚರಿಸುವ ದೃಷ್ಟಿಯಿಂದಲೂ ಮತ್ತು ಕಕ್ಷಿದಾರರಿಗೆ ಕನ್ನಡ ಭಾಷೆಯಲ್ಲಿ ವ್ಯಹರಿಸುವುದರಿಂದ ಅರ್ಥವಾಗುವ ದೃಷ್ಟಿಯಿಂದ ಈ ನ್ಯಾಯಾಲಯಗಳಲ್ಲಿ ಕನ್ನಡದ ಬಳಕೆಯನ್ನು ಕಡ್ಡಾಯಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಭಾಗಶಃ ನಿಜ.

ಆ) ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುವುದು.

ವಿಷಯ : ರಾಯಚೂರು ಥರ್ಮಲ್ -೪ ಘಟಕದ ಪ್ರಗತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 382 (667)

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?